LIFT IRRIGATION SCHEME FROM GAJANUR DAM

287 Sri S. M. SHEERANALY CHANDRASEKHAR (Hosanagar) Will the Minister of State for Major Irrigation be pleased to state :—

a) whether they have received any representation from the general public of Shimoga District to provide Lift Irrgiation Scheme from Gajanur Dam (Tunga River);

b) the action the Governmnet has taken on the representation ?

Sri H. N. NANJE GOWEA (Minister of State for Major Irrigation).—

a) No.

b) Dose not arise.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ:—ನನ್ನ ಎರಡು ಪ್ರಶ್ನೆಗಳಿಗೂ 'ಇಲ್ಲ' ವೆಂದು ಉತ್ತರ ಹೇಳಿದ್ದೀರಿ. ಮಾನ್ಯ ಶ್ರೀ ಚನ್ನಬಸಪ್ಪನವರು ಶಿವಮೊಗ್ಗಾಕ್ಕೆ ಸುಮಾರು ೬ ತಿಂಗಳುಗಳ ಹಿಂದೆ ಬಂದಾಗ ಆ ಜಿಲ್ಲೆಯ ಆಡಳಿತ ಪಕ್ಷದ ಶಾಸಕರು, ಪಾರ್ಲಿಮೆಂಟ ಸದಸ್ಯರು, ಮತ್ತು ಹಿಂದೆ ಅರಣ್ಯಶಾಖೆಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಎಚ್. ಎಸ್. ರುದ್ರಪ್ಪನವರೂ ಇವರೆಲ್ಲರೂ ಸೇರಿ ಒಂದು ಮೀಟಿಂಗ್ ನಡೆಸಿ ಈ ಒಂದು ಆಣೆಕಟ್ಟಿನಿಂದ ಯಾತ ನೀರಾವರಿಯೋಜನೆಯನ್ನು ಮಾಡಬೇಕೆಂದು ನಿರ್ಣಯಮಾಡಿದ್ದರು. ಮಳೆಗಾಲದಲ್ಲಿ ಆ ಡ್ಯಾಮಿನಮೇಲೆ ಸುಮಾರು ೯—೧೦ ಅಡಿ ನೀರು ಒವರಫ್ಲೊ ಆಗುವುದರಿಂದ, ಈ ಆಣೆಕಟ್ಟಗೆ ಲಿಫ್ಟ ಇರ್ರಿಗೇಷನ ಸ್ಕೀಂ ಮಾಡುವುದು ಒಳ್ಳೆಯದೆಂ: ನ ತೀರ್ಮಾನಮಾಡಿದ್ದರು. ಶಿವಮೊಗ್ಗ ತಾಲ್ಲೂಕಿನ ಗಾರನಕೆರೆ ಎಂಬಲ್ಲಿ ಅದಕ್ಕೆ ಫೀಡ್ ಮಾಡಿದರೆ ಸುಮಾರು ೩-೪ ತಾಲ್ಲೂಕುಗಳಿಗೆ ನೀರು ಸಿಗುತ್ತದೆಂದು ಒಪ್ಪಿಕೊಂಡು ಅಲ್ಲಿನವರು ಸರ್ಕಾರಕ್ಕೆ ಒಂದು ಮನವಿಯನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡಿದ್ದೀರಾ ?

† ಶ್ರೀ ಎಚ್. ಎನ್. ನಂಜೇಗೌಡ:—ಸರ್ಕಾರದ ವತಿಯಲ್ಲಿರತಕ್ಕ ಮಾಹಿತಿಯ ಪ್ರಕಾರ ಇದರ ಲಿಫ್ಟ ಇರ್ರಿಗೇಷನ್ ಸ್ಕೀಂ ಇಲ್ಲ. ಟ್ರಬ್ಯೂನಲ್ ಮುಂದೆ ಇದರ ಬಗ್ಗೆ ಯೋಜನೆಯನ್ನು ಕೊಡುವಾಗ ತುಂಗಾ ನದಿಯ ನೀರನ್ನು ಯಾವ ರೀತಿಯಲ್ಲಿ ಉಪಯೋಗಿಸುವುದಕ್ಕೆ ಸಾಧ್ಯವೆಂಬ ಯೋಜನೆಯನ್ನು ಸಲ್ಲಿಸಿದ್ದಾರೆ. ಮಾನ್ಯ ಸದಸ್ಯರು ಇದರ ಬಗ್ಗೆ ಪ್ರಶ್ನೆ ಹಾಕಿಲ್ಲ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್:— ನಾನು ತುಂಗಾ ನದಿಯ ನೀರು ವೇಸ್ಟ್ ಆಗುತ್ತಿದೆ ಆದ್ದರಿಂದ ಈ ಆಣೆಕಟ್ಟಗೆ ಒಂದು ಯಾತ ನೀರಾವರಿ ಯೋಜನೆಯನ್ನು ಮಾಡಬೆಕೆಂದು ಸಾರ್ವಜನಿಕರಿಂದ ಮನವಿಯೇನಾದರೂ

ಸರ್ಕಾರಕ್ಕೆ ಬಂದಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಆದ್ದರಿಂದ ಮಾನ್ಯ ಶ್ರೀ ಚನ್ನಬಸಪ್ಪನವರು ಬಂದಾಗ ಅಲ್ಲಿ ಮಿಟಿಂಗನಲ್ಲಿ ಎನೇನು ನಡೆಯಿತೆಂಬುದನ್ನು ತಾವು ವಿಚಾರಮಾಡಿ ಉತ್ತರ ಕೊಟ್ಟಿದ್ದೀರಾ?

ಅಧ್ಯಕ್ಷರು —ಈಗತಾನೇ ಮಾನ್ಯ ಮಂತ್ರಿಗಳು ಸರ್ಕಾರಕ್ಕೆ ಬಂದ ಮಾಹಿತಿ ಪ್ರಕಾರ ಉತ್ತರ ಕೊಟ್ಟಿದ್ದೇನೆಂದು ಹೇಳಿದರು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೆಖರ.—ಪ್ರತಿವರ್ಷವೂ ಬರಗಾಲ ಪೀಡಿತವಾಗುವ ಅನೇಕ ತಾಲ್ಲೂಕುಗಳಲ್ಲಿ ಅಂದರೆ ಹಿರೇಕೆರೂರು ಮತ್ತು ಹೊನ್ನಾಳಿ ತಾಲ್ಲೂಕಿನ ಸುಮಾರು ೭೫ ಗ್ರಾಮಗಳಲ್ಲಿ ಬರುವುದರಿಂದ, ಅಲ್ಲಿ ರೇನ್ ಷ್ಯಾಡೊ ಬೆಲ್ಟ ಏರಿಯಾದಿಂದ ದುಃಸ್ಥಿತಿ ಇರುವುದರಿಂದ ಈ ಆಣೆಕಟ್ಟಿನಿಂದ ಯಾತ ನೀರಾವರಿ ಯೋಜನೆಯನ್ನು ಮಾಡುವುದರಿಂದ ಸುಮಾರು ೯ ಅಥವಾ ೧೦ ಅಡಿ ಎತ್ತರದಲ್ಲಿ ನೀರು ಒವರ್ ಫ್ಲೊ ಆಗುತ್ತಿದೆ ಅದು ವೇಸ್ಟ್ ಆಗುತ್ತಿದೆ. ಅದನ್ನು ಉಪಯೋಗಿಸುವುದಕ್ಕಾಗಿ ಈ ಯೋಜನೆಯನ್ನು ಕೈಗೊಳ್ಳುತ್ತೀರಾ?

ಶ್ರೀ ಎಚ. ಎನ್. ನಂಜೇಗೌಡ —ಅಪ್ಪರ ತುಂಗ ನೀರಿನ ವಿಚಾರವಾಗಿ ಆಗಲಿ ಅಥವಾ ಭದ್ರ ನೀರಿನ ವಿಚಾರವಾಗಿ ಆಗಲಿ ಟ್ರಿಬ್ಯೂನಲ್ ತೀರ್ಮಾನ ಅವಲಂಬಿಸಿಯೇ ಸರ್ಕಾರ ಒಂದು ತೀರ್ಮಾನವನ್ನು ಇದರ ಬಗ್ಗೆ ತೆಗೆದುಕೊಳ್ಳಬೇಕಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಇವತ್ತು ಏನೂ ಮಾಡುವುದಕ್ಕಾಗುವುದಿಲ್ಲ. ಅದರ ಬಗ್ಗೆ ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ:—ಕಟ್ಟೆಯ ಮೇಲೆ ೯—೧೦ ಅಡಿ ನೀರು ಒವರಫ್ಲೊ ಆಗುತ್ತಿದ್ದರೆ, ಮಾನ್ಯ ಮಂತ್ರಿಗಳು ಹೇಳುವುದನ್ನು ನೋಡಿದರೆ, ಅದರ ಕಟ್ಟೆಯನ್ನು ಏರಿಸಿ ನಮ್ಮ ತೀರ್ಥಹಳ್ಳಿ ತಾಲ್ಲೂಕನ್ನು ಮುಳುಗಿಸಬೇಕೆಂದು ಏನಾದರೂ ಯೋಚನೆಮಾಡುತ್ತಾ ಇದ್ದಾರೆಯೇ?

ಶ್ರೀ ಎಚ. ಎನ್. ನಂಜೇಗೌಡ:—ಇದು ಲಿಫ್ಟ್ ಇರ್ರಿಗೇಷನ್ನಿಗೆ ಸಂಬಂಧಪಟ್ಟ ಪ್ರಶ್ನೆ. ಟ್ರಿಬ್ಯೂನಲ್ ಮತಿಯಿಂದ ತೀರ್ಮಾನ ಬಂದಮೇಲೆ ನಮಗೆ ಇಲ್ಲಿ ಎಷ್ಟು ನೀರು ಸಿಗುತ್ತದೆಂಬುದನ್ನು ನೋಡಿ ನಂತರ ಅಂತಿಮ ತೀರ್ಮಾನವನ್ನು ಇದರ ಬಗ್ಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ:—ಯಾವಾಗಲೂ ಕಟ್ಟೆ ಏರಿಸಬೇಕಾದರೆ ಅಲ್ಲಿರತಕ್ಕ ಜನರ ಸಾವು, ಬದುಕಿನ ಪ್ರಶ್ನೆಯನ್ನೂ ಸಹ ನೋಡಬೇಕು. ಮಲೆನಾಡಿನ ಪ್ರದೇಶಗಳಲ್ಲಿರತಕ್ಕ ಜನರಿಗೆ ಯಾವ ರೀತಿಯಲ್ಲಿಯೂ ನೀರಿಗೆ ತೊಂದರೆಯಾಗದಂತೆ ನೋಡಿಕೊಂಡು ಒಂದ ನಿರ್ಧಾರವನ್ನು ಮಾಡಬೇಕು.

SRI H. M. CHANNABASAPPA.—Why is the hon. Member streching his imagination too far?

SRI KONANDUR LINGAPPA.—It is a matter of fact. It is our life and death question-for you and for me also!

ಶ್ರೀ ಎಚ. ಎಂ. ಚನ್ನಬಸಪ್ಪ:—ಮುಳುಗಡೆಯಾಗತಕ್ಕವರಿಗೆ ಲೈಫ್ ಎಂಡ್ ಡೆತ್ ಪ್ರಶ್ನೆ ಬರುತ್ತದೆ ಅವರೇನೂ ಕಟ್ಟಿಯನ್ನು ಎತ್ತರಿಸುತ್ತೇವೆಂದು ಹೇಳಲಿಲ್ಲ. ಎತ್ತರಿಸುವ ಪ್ರಶ್ನೆ ಬಂದಾಗ ಅದರ ಸಾಧಕಬಾಧಕಗಳನ್ನು ಆಲೋಚನೆಮಾಡುತ್ತೇವೆ. ಎತ್ತರಿಸಿಬಿಡುತ್ತೇವೆಂಬು ಯಾರು, ಎಲ್ಲಿ ಯಾವಾಗ ಹೇಳಿದರು?

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್:—ನಾನು ಕೇಳುವ ಪ್ರಶ್ನೆಯೇ ಬೇರೆ. ಕಟ್ಟಿಯನ್ನು ಏರಿಸುವ ಪ್ರಶ್ನೆ ಬರುತ್ತಾ ಇಲ್ಲ. ಮಳೆಗಾಲದಲ್ಲಿ ಸುಮಾರು ೯–೧೦ ಅಡಿ ಅಲ್ಲಿ ನೀರು ಒವರಫ್ಲೊ ಆಗುತ್ತದೆ. ಅದು ವೇಸ್ಟ ಆಗುತ್ತಿದೆ. ಅದನ್ನು ತಪ್ಪಿಸಿ ಆ ನೀರನ್ನು ಉಪಯೋಗಮಾಡುವುದಕ್ಕಾಗಿ ಈ ಒಂದು ಯೋಜನೆಯನ್ನು ಮಾಡುವುದರಿಂದ ಸುಮಾರು ೩–೪ ತಾಲ್ಲೂಕುಗಳಿಗೆ ನೀರು ಫೀಡ್ ಆಗುತ್ತದೆ. ಆದ್ದರಿಂದ ಈ ಯೋಜನೆಯನ್ನು ಪರಿಶೀಲನೆಮಾಡುತ್ತೀರಾ?

ಶ್ರೀ ಎಚ. ಎಂ. ಚನ್ನಬಸಪ್ಪ:—ಮಳೆಗಾಲದಲ್ಲಿ ಇಂತಹ ಲಿಫ್ಟ್ ಇರ್ರಿಗೇಷನ್ ಸ್ಕೀಂ ಲಗತ್ತಾಗುವುದಿಲ್ಲ. ಲಿಫ್ಟ್ ಇರ್ರಿಗೇಷನ್ ಸ್ಕೀಮುಗಳನ್ನು ಹಾಕಬೇಕಾದರೆ ವರ್ಷದಲ್ಲಿ ೧೨ ತಿಂಗಳುಗಳ ಕಾಲ ಮಳೆ ಬಿದ್ದರೆ ಮಾತ್ರ ಇಂತಹ ಲಿಫ್ಟ್ ಇರ್ರಿಗೇಷನ್ ಸ್ಕೀಮುಗಳಿಂದ ಇಕಾನಮಿ ಮಾಡಬಹುದು. ಆ ರೀತಿ ಮಾಡದೆ ಕೇವಲ ೬ ತಿಂಗಳು ಮಾತ್ರ ನೀರು ಹರಿಸಿದರೆ ವಿದ್ಯುಚ್ಛಕ್ತಿಮಂಡಲಿ ಇಂತಹ ಯೋಜನೆಗಳನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ತಾವು ಹೇಳತಕ್ಕದ್ದು ಒಂದು ಪ್ರಾಕ್ಟಿಕಲ್ ಪ್ರೊಪೊಸಿಶನ್ ಅಲ್ಲ.

ಶ್ರೀ ಎಂ.ಎಚ್.ಜಯಪ್ರಕಾಶ್ ನಾರಾಯಣ.— ಮಾನ್ಯ ಮಂತ್ರಿಯವರು ಈ ಅಂಶಗಳನ್ನು ಟ್ರಿಬ್ಯೂನಲ್ ಮುಂದೆ ಇಟ್ಟಿದ್ದಾರೆ ಎಂದು ಹೇಳಿದರು. ಟ್ರಿಬ್ಯೂನಲ್ ಮುಂದೆ ಇಡುವುದಕ್ಕೆ ಮೊದಲು ಅದರಿಂದ ಎಷ್ಟು ನೀರು ವೇಸ್ಟ್ ಆಗುತ್ತದೆ, ಎಷ್ಟು ನೀರು ಉಪಯೋಗಿಸಿಕೊಳ್ಳಬಹುದು ಎಂದು ತಿಳಿದುಕೊಂಡು ಟ್ರಿಬ್ಯೂನಲ್ ಮುಂದೆ ಇಟ್ಟಿದ್ದೀರಾ ?

ಶ್ರೀ ಎಚ್. ಎನ್ ನಂಜೇಗೌಡ.— ಟ್ರಿಬ್ಯೂನಲ್ ಮುಂದೆ ಯೋಜನೆಯನ್ನು ಕಳಿಸಿ ಕೊಟ್ಟಿದ್ದೇವೆ. ಅದರ ಬಗ್ಗೆ ಮಾನ್ಯ ಮಂತ್ರಿಯವರು ಈಗಾಗಲೇ ಹೇಳಿದ್ದಾರೆ.

CONSTRUCTION OF BALEHOSUR TANK

289. Sri V. V. WAI (Shirahatti).—

Will the Minister for Public Works and Electricity be pleased to state:—

(a) when the Cabinet Sub Committee of Government accorded sanction for the construction of Balehosur Tank;